**<u>ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್</u>**

**<u>ಸಿ.ಸಿ ನಂ.585/2023</u>**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | **ರೇಷ್ಮಾಬಾನು ಬಾಳಂಬೀಡ** | ಡಿಡಬ್ಲ್ಯೂ | 1 |
| ತಂದೆ:ಗಂಡನ ಹೆಸರು | : | ಹಸನಮಿಯಾ | | |
| ವಯಸ್ಸು | : | 33 ವರ್ಷ | | |
| ಉದ್ಯೋಗ | : | ಮನೆಕೆಲಸ | | |
| ವಾಸ ಸ್ಥಳ | : | ತುರಬಂದಿ ಓಣಿ, ಹಾನಗಲ್ ಟೌನ್ | | |

**<u>ದಿನಾಂಕ:22.03.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ: ಆರೋಪಿ ಪರ ಶ್ರೀ. ಐ ಕೆ ಹೆಚ್ ವಕೀಲರಿಂದಃ</u>**

ದೂರುದಾರರು ನನಗೆ ಎಂದೂ ಸಹ ಪರಿಚಯಸ್ಥರಲ್ಲ. ನನ್ನ ಮತ್ತು ದೂರುದಾರರ ನಡುವೆ ಯಾವುದೇ ವ್ಯವಹಾರಗಳು ಆಗಿರುವುದಿಲ್ಲ. ನಾನು ದೂರುದಾರರಿಗೆ ಎಂದೂ ಸಹ ಚೆಕ್ ನೀಡಿರುವುದಿಲ್ಲ. ಅದೇ ರೀತಿ ದೂರುದಾರರಿಂದ ಎಂದೂ ಸಹ ಹಣ ಪಡೆದುಕೊಂಡಿರುವುದಿಲ್ಲ. ನಿಪಿ-1 ರಂತಹ ಚೆಕ್ ಮೇಲಿರುವ ಸಹಿ ನನ್ನದಾಗಿರುತ್ತದೆ. ನಿಪಿ-1 ರಂತಹ ಚೆಕ್ ನ್ನು ನೀಲಪ್ಪ ಎಂಬುವವರಿಗೆ ಕೊಟ್ಟಿದ್ದೆನು. ಆ ಚೆಕ್ ನಂಬರ 373261 ಆಗಿರುತ್ತದೆ. ಈ ಚೆಕ್ ನ್ನು ನೀಲಪ್ಪ ಎಂಬುವವರಿಗೆ ಕೊಟ್ಟಿದ್ದೆನು. ಆ ಸಂದರ್ಭದಲ್ಲಿ ನಾನು ಖಾಲಿ ಚೆಕ್ ನ್ನು ನೀಲಪ್ಪ ಎಂಬುವವರಿಗೆ ಕೊಟ್ಟಿದ್ದೆನು. ಆ ಚೆಕ್ ನ್ನು ನಾನು ನನ್ನ ತಂದೆದಯವರ ಮೂಲಕ ನೀಲಪ್ಪ ಎಂಬುವವರಿಗೆ ಕೊಟ್ಟಿದ್ದೆನು. ನನಗೆ ಕನ್ನಡ ಇಂಗ್ಲೀಷ್ ಓದಲು ಮತ್ತು ಬರೆಯಲು ಬರುವುದಿಲ್ಲ. ಚೆಕ್ ಕಾನೂನು ಬದ್ದವಾಗಿರುವುದಿಲ್ಲ. ನಾನು ದೂರುದಾರರಿಂದ ಎಂದೂ ಸಹ ರೂ. 5 ಲಕ್ಷದ 20 ಸಾವಿರ ಹಣವನ್ನು ಸಾಲವಾಗಿ

ಪಡೆದುಕೊಂಡಿರುವುದಿಲ್ಲ. ಆದ್ದರಿಂದ ದೂರುದಾರು ಸಲ್ಲಿಸಲಾದ ದುರನ್ನು ವಾಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಪಿರ್ಯಾದಿದಾರರ ಪರ ಶ್ರೀ. ಎಂ ಹೆಚ್ ಹೆಚ್ ವಕೀಲರಿಂದಃ**

**(ಪಿರ್ಯಾದಿದಾರರ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಹಾನಗಲ್

ಸಾಕ್ಷಿಧಾರರ ಸಹಿ

**<u>ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್</u>**

**<u>ಸಿ.ಸಿ ನಂ.340/2023</u>**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ರಂಜನಿ ಎ., | ಡಿಡಬ್ಲ್ಯೂ | 1 |
| ತಂದೆ‌ಃಗಂಡನ ಹೆಸರು | : | ವಿಶ್ವನಾಥ ಪಠಾರಿ | | |
| ವಯಸ್ಸು | : | 32 ವರ್ಷ | | |
| ಉದ್ಯೋಗ | : | ವ್ಯಾಪಾರ | | |
| ವಾಸ ಸ್ಥಳ | : | ಬೆಟ್ಟಂಪಾಡಿ ಗ್ರಾಮ, ಪುತ್ತೂರು ತಾಲೂಕು ದಕ್ಷಿಣ ಕನ್ನಡ ಜಿಲ್ಲೆ | | |

**<u>ದಿನಾಂಕ:27.02.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ: ಆರೋಪಿತರ ಪರ ಶ್ರೀ.ಆರ್ ವಿ ಡಬ್ಲ್ಯೂ ವಕೀಲರಿಂದಃ</u>**

ನಾನು 1 ನೇ ಆರೋಪಿಯಿದ್ದು 2 ನೇ ಆರೋಪಿಯ ಪರವಾಗಿಯೂ ಸಹ ನಾನು ಸಾಕ್ಷಿ ನುಡಿಯುತ್ತಿದ್ದೇನೆ. 2 ನೇ ಆರೋಪಿ ನನ್ನ ತಂಗಿ. ನಾನು ಮತ್ತು 2 ನೇ ಆರೋಪಿ ಕೂಡಿಕೊಂಡು ಒಂದು ಕೋಳಿ ಫಾರಮ್ ಮತ್ತು ಕೋಳಿ ಆಹಾರವನ್ನು ಉತ್ಪಾದಿಸುವ ವ್ಯವಹಾರ ಮಾಡುತ್ತಿದ್ದೆವು. ನಾವು ಶ್ರೀ ಆದಿಶಕ್ತಿ ಪಾಲುದಾರಿಕೆ ಎಂಬ ಹೆಸರಿನಲ್ಲಿ ಈ ವ್ಯವಹಾರ ನಡೆಸುತ್ತಿದ್ದೆವು. ಆ ಕೋಳಿ ಫಾರಮನ್ನು ಮೇ 2022 ರಂದು ಮುಕ್ತಾಯಗೊಳಿಸಿರುತ್ತೇವೆ. ನಮಗೆ ದೂರುದಾರರ ಪರಿಚಯ ಇದೆ. ನಾವು ದೂರುದಾರರ ಗೋವಿನ ಜೋಳದ ಖರೀದಿ ವ್ಯವಹಾರವನ್ನು ಮಾಡಿರುತ್ತೇವೆ. ನಾವು ಸುಮಾರು 1 ವರ್ಷಗಳ ಕಾಲ ದೂರುದಾರರ ಜೊತೆ ಗೋವಿನ ಜೋಳದ ಖರೀದಿ ವ್ಯವಹಾರವನ್ನು ಮಾಡಿರುತ್ತೇವೆ. ನಾವು ದೂರುದಾರರ ಜೊತೆ ಸುಮಾರು ಲಕ್ಷಾಂತರ

ರೂ.ಗಳ ವ್ಯವಹಾರ ಮಾಡಿರುತ್ತೇವೆ. ನಾವು ದೂರುದಾರರಿಂದ ಖರೀದಿಸಿದ ಗೋವಿನ ಜೋಳಕ್ಕೆ ಸಂಬಂದಪಟ್ಟ ಹಣವನ್ನು ಬ್ಯಾಂಕ್ ಮೂಲಕ ಮತ್ತು ಆ ಲಾರಿ ಚಾಲಕರ ಮೂಲಕ ಸಹ ನಗದು ರೂಪದಲ್ಲಿ ದೂರುದಾರರಿಗೆ ಹಣ ಕೊಟ್ಟಿರುತ್ತೇವೆ. ನಾವು ದೂರುದಾರರಿಗೆ ಆ ಗೋವಿನ ಜೋಳದ ಬಾಬ್ತು ರೂ. 3,15,982/- ಗಳಿಗೆ ಒಂದು ಚೆಕ್ ನ್ನು ಕೊಟ್ಟಿರುತ್ತೇವೆ. ದಿನಾಂಕ 15.05.2022 ರಂದು ನಮ್ಮ ಮತ್ತು ದೂರುದಾರರ ನಡುವೆ ಲೆಕ್ಕ ಪತ್ರ ಮುಕ್ತಾಯವಾದ ನಂತರ ಆ ಚೆಕ್ ನ್ನು ದೂರುದಾರಿಗೆ ನೀಡಿರುತ್ತೇವೆ. ಅದೇ ದಿನ ಆ ಚೆಕ್ ನ್ನು ದೂರುದಾರರಿಗೆ ನೀಡಿರುತ್ತೇವೆ. ನಾವು ದೂರುದಾರರಿಗೆ ಎಂದೂ ಸಹ ರೂ. 13,15,982/- ಗಳಿಗೆ ಚೆಕ್ ನ್ನು ನೀಡಿರುವುದಿಲ್ಲ. ದೂರುದಾರರ ಆ ಚೆಕ್ ನ ಮೇಲೆ ಮೊತ್ತವನ್ನು ತಿದ್ದುಪಡಿ ಮಾಡಿ ರೂ. 13,15,982/-ಕ್ಕೆ ನಮೂದಿಸಿಕೊಂಡಿರುತ್ತಾರೆ. ಆ ಚೆಕ್ ಬ್ಯಾಂಕ್ ಆಫ್ ಬರೊಎಾಡಾ ಶಾಖೆಗೆ ಸಂಬಂಧಿಸಿದ್ದಾಗಿರುತ್ತದೆ. ನಾವು ಎಂದೂ ಸಹ ದೂರುದಾರರಿಗೆ ವಿಜಯಾ ಬ್ಯಾಂಕ್ ಚೆಕ್ ನೀಡಿರುವುದಿಲ್ಲ. ನಾವು ದೂರುದಾರರ ಜೊತೆ ವ್ಯವಹಾರ ಮಾಡಿದ ಸಂದರ್ಭದಲ್ಲಿ ವಿಜಯಾ ಬ್ಯಾಂಕ್ ಅಸ್ತಿತ್ವದಲ್ಲಿ ಇರಲಿಲ್ಲ. ಆದ್ದರಿಂದ ದದೂರುದಾರರ ಸಲ್ಲಿಸಿದ ದೂರನ್ನು ಮಾನಸಿಕ ದೈಹಿಕ ಹಾಗೂ ಆರ್ಥಿಕ ತೊಂದರೆ ಉಂಟಾಗಿರುವ ಕಾರಣ ದೂರನ್ನು ವಜಾ ಮಾಡಿ ನನಗೆ ಪರಿಹಾರ ಕೊಡಿಸಿಕೋಡಬೇಕೆಂದು ಕೇಳಿಕೊಳ್ಳುತ್ತೇನೆ.

**<u>ಪಾಟೀ ಸವಾಲುಃ ಪಿರ್ಯಾದಿದಾರರ ಪರ ಶ್ರೀ.ಎಸ್ ವಿ ಎಂ ವಕೀಲರಿಂದಃ</u>**

ನನ್ನ ತಂದೆ ಚಾಲಕ ವೃತ್ತಿ ಮಾಡುತ್ತಾರೆ. ನಾನು 2021 ರಂದು ನಾವು ಶ್ರೀ ಆದಿಶಕ್ತಿ ಪಾಲುದಾರಿಕೆ ಸಂಸ್ಥೆಯನ್ನು ತೆರೆದಿರುತ್ತೇವೆ. ನಾನು ಮತ್ತು 2 ನೇ ಆರೋಪಿ ಆ ಪಾಲುದಾರಿಕೆ ಸಂಸ್ಥೆಯ ಪಾಲುದಾರರಾಗಿರುತ್ತೇವೆ ನಮ್ಮನ್ನು ಹೊರತು ಪಡಿಸಿ ಬೇರೆ ಯಾರು ಸಹ ಪಾಲುದಾರರು ಇರುವುದಿಲ್ಲ. ನಾವು ದಿನಕ್ಕೆ ಎಷ್ಟು ಕ್ವಿಂಟಾಲ್ ಗೋವಿಜ ಜೋಳ ಖರೀದಿಸುತ್ತಿದ್ದೆವು ಎಂಬುದು ನನಗೆ ನೆನಪಿಲ್ಲ ಆದರೆ ಅವಶ್ಯಕತೆ ಇದ್ದ ಸಂದರ್ಭದಲ್ಲಿ ಖರೀದಿಸುತ್ತಿದ್ದೆವು ಎಂದು ಸ್ವತಃ ನುಡಿಯುತ್ತಾರೆ. ಆ ಕೋಳಿ ಆಹಾರ ತಯಾರಿಸುವ ಪ್ಲಾಂಟ್ ಉಪ್ಪಿನಂಗಡಿಯ ಪೇರನೆಯಲ್ಲಿ ಅಂಗಡಿಯನ್ನು ಬಾಡಿಗೆಗೆ ಪಡೆದುಕೊಂಡಿದ್ದೆವು. ನಮ್ಮ ಕಚೇರಿ ಮತ್ತು ಪ್ಲಾಂಟ್ ಬೇರೆ ಬೇರೆ ಸ್ಥಳಗಳಲ್ಲಿ ಇದ್ದವು. ಆ ಪ್ಲಾಂಟ್ ಗೆ ತಿಂಗಳಿಗೆ 65 ಸಾವಿರ ಬಾಡಿಗೆಗೆ ಕೊಡುತ್ತಿದ್ದೆವು. ಆ ಪ್ಲಾಂಟ್ ನಲ್ಲಿ

ಸುಮಾರು 11 ಜನ ಕೆಲಸಗಾರು ಇದ್ದರು. ಶ್ರೀ ಆದಿಶಕ್ತಿ ಪಾಲುದಾರಿಕೆಯನ್ನು ಸುಮಾರು 16 ಕೋಟಿ ಬಂಡವಾಳ ಹೂಡಿ ಪ್ರಾರಂಭಿಸಿದೆವು ಎಂದರೆ ಸರಿಯಲಲ. ಸಾಕ್ಷಿಯು ಸುಮಾರು 1 ಕೋಟಿಯಷ್ಟು ಬಂಡವಾಳ ಹೂಡಿದ್ದೆವು ಎಂದು ಸ್ವತಃ ನುಡಿಯುತ್ತಾರೆ. ಆ ಪ್ಲಾಂಟೇಷನ್ ಗೆ ಸಂಬಂಧಪಟ್ಟಂತೆ ನಾವು ಖರೀದಿಸಿದ ವಸ್ತುಗಳ ಬಗ್ಗೆ ರಜಿಸ್ಟರನ್ನು ನಿರ್ವಹಣೆ ಮಾಡಿರುತ್ತೇವೆ. ನಾವು ದೂರುದಾರರನ್ನು ಹೊರತು ಪಡಿಸಿ ಬೇರೆ ಕಡೆ ಗೋವಿನ ಜೋಳವನ್ನು ಖರೀದಿಸಿರುವುದಿಲ್ಲ. ನಾವು ಸುಗುಮಾ ಕಂಪನಿಯಿಂದ ಜೋಳವನ್ನು ಖರೀದಿಸಿರುವುದಿಲ್ಲ ಬದಲಾಗಿ ನೇರವಾಗಿ ಆಹಾರವನ್ನೇ ಖರೀದಿಸಿರುತ್ತೇವೆ. ನಾವು ಸುಗುಮಾ ಕಂಪನಿಯವರಿಂದ ಸುಮಾರು 6 ತಿಂಗಳುಗಳ ಕಾಲ ನೇರವಾಗಿ ಆಹಾರವನ್ನು ಖರೀದಿಸಿರುತ್ತೇವೆ. ಸುಗುಮಾ ಕಂಪನಿಯರ ಜೊತೆ ಸುಮಾರು 30 ರಿಂದ 40 ಲಕ್ಷ ವ್ಯವಹಾರ ಆಗಿರುತ್ತದೆ ಎಂದರೆ ಸರಿ ಸಾಕ್ಷಿಯು ನಿಗಧಿತವಾಗಿ ಎಷ್ಟು ವ್ಯವಹಾರ ಆಗಿರುತ್ತದೆ ಎಂದು ಈಗ ಹೇಳಲಾಗುವುದಿಲ್ಲ. ನಾವು ಯುನಿಕ್ ಎಂಟರ್ ಪ್ರೈಸಸ್ ರವರಿಂದ ಕೋಳಿ ಮರಿ ಮತ್ತು ಆಹಾರವನ್ನು ಖರೀದಿಸಿರುತ್ತೇವೆ. ಆ ಯುನಿಕ್ ಎಂಟರ್ ಪ್ರೈಸಸ್ ಮಾಲೀಕರ ಹೆಸರು ಅಶೋಕ ಭಟ್ ಆಗಿರುತ್ತದೆ. ಸುಗುಮಾ ಮತ್ತು ಯುನಿಕ್ ಎಂಟರ್ ಪ್ರೈಸಸ್ ರವನ್ನು ಹೊರತು ಪಡಿಸಿ ಬೇರೆ ಬೇರೆಯವರ ಜೊತೆ ವ್ಯವಹಾರ ಮಾಡಿರುತ್ತೇವೆ. ಈ ಸಂಸ್ಥೆಗಳ ಜೊತೆ ನಮ್ಮ ಪಾಲುದಾರಿಕೆ ವ್ಯವಹಾರ ಮಾಡಿ ಸುಮಾರು 50 ರಿಂದ 60 ಕೋಟಿ ವ್ಯವಹಾರ ಆಗಿರುತ್ತದೆ ಎಂದರೆ ಸರಿಯಲ್ಲ ಸಾಕ್ಷಿಯು 2020 ರಿಂದ 22 ರ ಅವಧಿಯಲ್ಲಿ ಸುಮಾರು 6 ಕೋಟಿಯಷ್ಟು ವ್ಯವಹಾರ ಆಗಿರುತ್ತದೆ ಎಂದು ಸ್ವತಃ ನುಡಿಯುತ್ತಾರೆ. ನಾವು ಈ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಒಂದು ವರ್ಷ ಅವಧಿಗೆ ಆದಾಯ ತೆರಿಗೆ ರಿಟರ್ನಸನ್ನು ಸಲ್ಲಿಸಿರುತ್ತೇವೆ. ನಾವು ದೂರುದಾರರ ಜೊತೆಯಾಗಲಿ ಸುಗುಮಾ ಹಾಗೂ ಯುನಿಕ್ ಎಂಟರ್ ಪ್ರೈಸಸ್ ರವರ ಜೊತೆ ವ್ಯವಹಾರಗಳನ್ನು ಬ್ಯಾಂಕ್ ಆಫ್ ಬರೋಡಾ ಬೆಟ್ಟಂಪಾಡಿ ಶಾಖೆಯ ಕರೆಂಟ್ ಖಾತೆ ಸಂಖ್ಯೆ 7075020000171243 ಮೂಲಕವೇ ಮಾಡಿರುತ್ತೇವೆ ಎಂದರೆ ಸರಿ. ಸಾಕ್ಷಿಯು ಆ ಹಣವನ್ನು ನಗದು ರೂಪದಲ್ಲಿಯೂ ಸಹ ಕೊಟ್ಟಿರುತ್ತೇವೆ ಎಂದು ಸ್ವತಃ ನುಡಿಯುತ್ತಾರೆ. ಈ ರೀತಿ ನಗದು ರೂಪದಲ್ಲಿ ಹಣ ಕೊಟ್ಟ ಸಂದರ್ಭದಲ್ಲಿಯೂ ಸಹ ಬಿಲ್ಲುಗಳನ್ನು ಹಾಕುತ್ತೇವೆ. ಈ ಬಗ್ಗೆ ನಮ್ಮ ಆದಾಯ ತೆರಿಗೆ ರಿಟರ್ನನಲ್ಲಿ ತೋರಿಸಿರುತ್ತೇವೆ. ನಾವು

ವ್ಯವಹಾರ ಮಾಡುವ ಸಂದರ್ಭದಲ್ಲಿ ದೂರುದಾರರು ಸಗುಮಾ ಹಾಗೂ ಯುನಿಕ್ ಎಂಟರ್ ಪ್ರೈಸಸ್ ರವರ ಜೊತೆ ಫೋನ್ ಮೂಲಕವು ಸಹ ವ್ಯವಹಾರ ಮಾಡುತ್ತೇವೆ ಎಂದರೆ ಸರಿ. ಆ ಪ್ರಕಾರ ಲಾರಿ ಮೂಲಕ ಸರಕುಗಳು ಬಂದಿದ್ದವು ಈ ಬಗ್ಗೆ ಲಾರಿ ಬಾಡಿಗೆಯನ್ನು ಮಾತ್ರ ಕೊಡುತ್ತೇವೆ ಎಂದರೆ ಸಾಕ್ಷಿಯು ಬಾಡಿಗೆ ಜೊತೆಗೆ ಸರಕಿನ ಹಣವನ್ನು ಸಹ ಅವರ ಜೊತೆ ಕೊಡುತ್ತೇವೆ ಎಂದು ಸ್ವತಃ ನುಡಿಯುತ್ತಾರೆ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಪ್ರತಿ ತಿಂಗಳು ಪುತ್ತೂರಿಗೆ ಹೋಗುತ್ತೇವೆ. ಪುತ್ತೂರಿನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಯದಲ್ಲಿ ನಮ್ಮ ವಿರುದ್ಧ ರೂ. 52 ಲಕ್ಷಕ್ಕೆ ಒಂದು ಚೆಕ್ ಪ್ರಕರಣ ದಾಖಲಾಗಿ ಆ ನಾಯಾಲಯಕ್ಕೆ ಹೋಗುತ್ತಿದ್ದೇವೆ ಎಂದರೆ ಸರಿ. ಆ ದೂರನ್ನು ಯುನಿಕ್ ಎಂಟರ್ ಪ್ರೈಸಸ್ ರವರು ನಮ್ಮ ವಿರುದ್ಧ ಸಲ್ಲಿಸಿರುತ್ತಾರೆ. ನಾವು ಯುನಿಕ್ ಎಂಟರ್ ಪ್ರೈಸಸ್ ರವರಿಗೆ ನೀಡಬೇಕಾಗಿದ್ದ ರೂ.52 ಲಕ್ಷ ಕೊಡದೇ ಇರುವ ಕಾರಣ ಚೆಕ್ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸಕ್ಷಿಯು ನಾವು ವರಿಗೆ ಎಷ್ಟು ಹಣ ಕೊಡಬೇಕೆಂಬುದು ಸಂಶಯದಿಂದ ಕೂಡಿರುವುದರಿಂದ ಮತ್ತು ಈ ಬಗ್ಗೆ ನಾವು ಖಾಲಿ ಚೆಕ್ ಕೊಟ್ಟಿದ್ದ ಕಾರಣ ಅವರು ತಮ್ಮ ಇಚ್ಚೆಗೆ ಬಂದಂತೆ ಚೆಕ್ ಬರೆದುಕೊಂಡು ಪ್ರಕರಣ ದಾಖಲಿಸಿದ್ದಾರೆ ಎಂದು ಸ್ವತಃ ನುಡಿಯುತ್ತಾರೆ. ಅದೇ ರೀತಿ ಮಂಗಳೂರು ನ್ಯಾಯಾಲಯದಲ್ಲಿ ರೂ. 3 ಲೆಕ್ಕೆ ಮತ್ತೊಂದು ಚೆಕ್ ಪ್ರಕರಣ ದಾಖಲಾಗಿದ್ದು ಅದನ್ನು ಕೋಸ್ಟಲ್ ಫಾರ್ಮ ರವರು ನಮ್ಮ ಪಾಲುದಾರಿಕೆ ಸಂಸ್ಥಯ ವಿರುದ್ಧ ದಾಖಲಿಸಿದ್ದು ಆ ಪ್ರಕರಣವನ್ನು ಇನ್ನೂ ಸಹ ವಿಚಾರಣೆಗೆ ಬಾಕಿ ಇದೆ ಆದರೆ ಅದೇ ನ್ಯಾಯಾಲಯದಲ್ಲಿ ಮತ್ತೊಂದು ಚೆಕ್ ಪ್ರಕರಣ ರೂ. 1 ಲಕ್ಷ 25 ಸಾವಿರ ಗಳಿಗೆ ದಾಖಲಿಸಿದ್ದು ಅದನ್ನು ರಾಜೀ ಮೂಲಕ ಬರೆಹರಿಸಿಕೊಂಡಿಡಿರುತ್ತೇವೆ. ಈ ಪ್ರಕಣಣಗಳನ್ನು ಹೊರತು ಪಡಿಸಿ ಬೇರೆ ಯಾವುದೇ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿರುವುದಿಲ್ಲ. ಸುಗುಮಾ ಕಂಪನಿಯವರು ನಮ್ಮ ವಿರುದ್ಧ ಯಾವುದೇ ಪ್ರಕರಣ ದಾಖಲಿಸಿರುವುದಿಲ್ಲ ಈ ಬಗ್ಗೆ ನೋಟಿಸು ಕೂಡ ಬಂದಿರುವುದಿಲ್ಲ.

**(ಪಿರ್ಯಾದಿದಾರರ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿಧಾರರ ಸಹಿ ಮತ್ತು ಜೆ.ಎಂ.ಎಫ್.ಸಿ, ಹಾನಗಲ್